# ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ : 8ನೇ ಮುಖ್ಯರಸ್ತೆ, ಅಶೋಕನಗರ, ತುಮಕೂರು- 572 103.
ದೂರವಾಣಿ : 2272615, 4014428, ಮಂಡಿಪೇಟೆ ಶಾಖೆ : 2272272

**ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆಸುತ್ತಿರುವ**

## 2019-2020 ನೇ ಸಾಲಿನ

# 39 ನೇ ವಾರ್ಷಿಕ ಸಾಮಾನ್ಯ ಸಭೆಯ

## • ಆಹ್ವಾನ ಪತ್ರಿಕೆ •

**ದಿನಾಂಕ : 16-12-2020, ಬುಧವಾರ ಬೆಳಗ್ಗೆ 10-30 ಗಂಟೆಗೆ**

ಬ್ಯಾಂಕಿನ ಅಧ್ಯಕ್ಷರಾದ

## ಶ್ರೀ ಎ. ವೈ. ನೇಮಿರಾಜಯ್ಯ

ಇವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ವೀಡಿಯೋ ಕಾನ್ಫರೆನ್ಸ್ ಮೂಲಕ ಲಾಗಿನ್ ಆಗಿ ಸಭೆಯ ಕಾರ್ಯಕಲಾಪದಲ್ಲಿ ಭಾಗವಹಿಸಲು ಕೋರುತ್ತೇವೆ.

ದಿನಾಂಕ : 23-11-2020
ಸ್ಥಳ : ತುಮಕೂರು

ಆಡಳಿತ ಮಂಡಳಿಯ ಪರವಾಗಿ
**ಜ್ವಾಲಾ ಪ್ರಸಾದ್**
ಮುಖ್ಯಕಾರ್ಯನಿರ್ವಾಹಕರು

**ವಿಶೇಷ ಸೂಚನೆ**

**ಸೂಚನೆ :**

1. ಗುರುತಿನ ಚೀಟಿ ಪಡೆಯದ ಮಾನ್ಯ ಸದಸ್ಯರೆಲ್ಲರೂ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ 2 ಭಾವಚಿತ್ರಗಳನ್ನು ಕೊಟ್ಟು ಬ್ಯಾಂಕಿನ ಗುರುತಿನ ಚೀಟಿ ಪಡೆಯುವುದು.
2. ಬ್ಯಾಂಕಿನ ಸದಸ್ಯರು ಹಿಂದಿನ 5 ವರ್ಷಗಳ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು 3 ನಿರಂತರ ಸಹಕಾರ ವರ್ಷಗಳವರೆಗೆ ಬ್ಯಾಂಕಿನ ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿದಂತೆ ಬ್ಯಾಂಕ್ ದೊರಕಿಸಿ ಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿ ವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂತಹ ಸದಸ್ಯರು ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರುವುದಿಲ್ಲ.
3. ಸಾಲ ಪಡೆದು ಸುಸ್ತಿದಾರರಾಗಿದ್ದಲ್ಲಿ, ವಾರ್ಷಿಕ ಸಾಮಾನ್ಯ ಸಭೆಗೆ ಮುಂಚಿತವಾಗಿ ಪಾವತಿಯಾಗಬೇಕಾದ ಸಾಲದ ಕಂತನ್ನು ಪಾವತಿಸುವುದು, ತಪ್ಪಿದ್ದಲ್ಲಿ ಅಂತಹ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮತ್ತು ನಿರ್ದೇಶಕರ ಚುನಾವಣೆಯಲ್ಲಿ ಮತ ಚಲಾಯಿಸುವ ಮತ್ತು ಸ್ಪರ್ಧಿಸುವ ಹಕ್ಕು ಇರುವುದಿಲ್ಲ.
4. 2019-2020 ನೇ ಸಾಲಿನ ಆಡಳಿತ ವರದಿ, ಲೆಕ್ಕಪರಿಶೋಧನಾ ವರದಿಯನ್ನು ಆಡಳಿತ ಕಛೇರಿಯ ಕೆಲಸದ ವೇಳೆಯಲ್ಲಿ ದಿನಾಂಕ : 05-12-2020 ರಿಂದ ನೀಡಲಾಗುವುದು. ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಇ-ಮೇಲ್ ವಿಳಾಸ ನೀಡಿದ ಸದಸ್ಯರಿಗೆ Soft Copy ಮುಖಾಂತರ ಕಳುಹಿಸಲಾಗುವುದು ಹಾಗೂ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ವರದಿಯನ್ನು ಪ್ರಕಟಿಸಲಾಗಿದೆ.

## • ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು •

1. ಪ್ರಾರ್ಥನೆ
2. ಸ್ವಾಗತ
3. ದಿವಂಗತ ಸದಸ್ಯರುಗಳಿಗೆ ಶ್ರದ್ಧಾಂಜಲಿ.
4. 39ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ ಓದಿ ಅಂಗೀಕರಿಸುವುದು.
5. ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದೃಢೀಕರಿಸುವುದು
6. 2019-2020ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಓದಿ ಅಂಗೀಕರಿಸುವುದು.
7. 2019-2020ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಆಡಳಿತ ಮಂಡಳಿಯವರ ಸಮಾಧಾನಗಳನ್ನು ಓದಿ ಅಂಗೀಕರಿಸುವುದು.
8. 2020-2021ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು
9. 2020-2021ನೇ ಸಾಲಿನ ಮುಂಗಡ ಪತ್ರ (ಬಡ್ಜೆಟ್) ಮಂಡನೆ ಮತ್ತು ಅನುಮೋದನೆ ಮಾಡುವುದು
10. 2019-2020ನೇ ಸಾಲಿನ ಲಾಭ ವಿಲೇವಾರಿ ಮಾಡಿರುವುದನ್ನು ಮಂಡಿಸುವುದು ಮತ್ತು ಅಂಗೀಕರಿಸುವುದು.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ
12. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು
13. ಅಧ್ಯಕ್ಷರ ಭಾಷಣ
14. ವಂದನಾರ್ಪಣೆ

## ಸೂಚನೆಗಳು

1. ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳಿದ್ದಲ್ಲಿ ದಿನಾಂಕ 11-12-2020 ರ ಒಳಗೆ ಲಿಖಿತ ಮೂಲಕ ಬ್ಯಾಂಕಿನ ಕೆಲಸದ ವೇಳೆಯಲ್ಲಿ ವ್ಯವಸ್ಥಾಪಕರಿಗೆ ತಲುಪಿಸಬಹುದು.
2. ಕಡಿಮೆ ಷೇರುಗಳಿರುವ ಹಾಲಿ ಸದಸ್ಯರು ಹೆಚ್ಚುವರಿ ಷೇರುಗಳನ್ನು ಪಡೆಯಲು ಸೂಚಿಸಿದೆ. (ರೂ 50/- ಮುಖಬೆಲೆಯ ಷೇರುಗಳಿರುವ (1 ಷೇರು) ಸದಸ್ಯರುಗಳಿಗೆ ಇದು ಕಡ್ಡಾಯವಾಗಿರುತ್ತದೆ.) ಷೇರು ಮುಖ ಬೆಲೆ ಪ್ರತಿ ಷೇರಿಗೆ ರೂ. 100/- ರೂಗಳಿಗೆ ಹೆಚ್ಚಿಸಲಾಗಿದ್ದು ಕನಿಷ್ಠ ರೂ. 1000/- ಇರಬೇಕಾಗಿರುತ್ತದೆ.
3. 2016-17ನೇ ಸಾಲಿನ ಷೇರು ಡಿವಿಡೆಂಡ್ ಪಡೆಯದವರು ದಿನಾಂಕ : 16-02-2021 ರ ಒಳಗೆ ಪಡೆಯಲು ಸೂಚಿಸಿದೆ. ತಪ್ಪಿದ್ದಲ್ಲಿ ಬೈಲಾ ಅನ್ವಯ ಅಪದ್ಧನ ನಿಧಿಗೆ ವರ್ಗಾಯಿಸಲಾಗುವುದು ಸದಸ್ಯರು ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯುವುದು, ಡಿವಿಡೆಂಡ್ ಹಣ ವರ್ಗಾಯಿಸಲು ಅನುಕೂಲವಾಗುತ್ತದೆ.
4. **ಸದಸ್ಯರ ವಿಳಾಸ ಬದಲಾಗಿದ್ದಲ್ಲಿ, ವಾರಸುದಾರರ ಬದಲಾವಣೆ ಇದ್ದಲ್ಲಿ ಕೂಡಲೇ ಸೂಕ್ತ ಪುರಾವೆಯೊಂದಿಗೆ ಬ್ಯಾಂಕಿಗೆ ಸಲ್ಲಿಸಲು ಕೋರಿದೆ.**
5. **ಬ್ಯಾಂಕಿನ ಸದಸ್ಯರುಗಳಲ್ಲಿ ಕೆಲವರು ದೈವಾದೀನರಾಗಿರುವುದರಿಂದ ಅವರಿಗೆ ಸಂಬಂಧ ಪಟ್ಟ ವಾರಸುದಾರರು ಸೂಕ್ತ ದಾಖಲೆಗಳನ್ನು ಒದಗಿಸಿ ಮೃತರ ಹೆಸರಿನಲ್ಲಿರುವ ಷೇರು ಹಣ ಹಾಗೂ ಡಿವಿಡೆಂಡನ್ನು ಜಾಗ್ರತೆ ಪಡೆಯಬೇಕೆಂದು ಕೋರಿದೆ.**
6. **ಸದಸ್ಯರ ಇಮೇಲ್ ವಿಳಾಸ, ಹಾಗೂ ಮೊಬೈಲ್ ಸಂಖ್ಯೆಯನ್ನು ಬ್ಯಾಂಕಿನಲ್ಲಿ ರಿಜಿಸ್ಟರ್ ಮಾಡಿಸುವುದು.**

   **ಬ್ಯಾಂಕಿನ ಮಾಹಿತಿಯನ್ನು ತಮಗೆ ತಲುಪಿಸಲು ಅನುಕೂಲವಾಗುತ್ತದೆ. ಎಸ್.ಎಂ.ಎಸ್. ಮೂಲಕ ತಮ್ಮ ಖಾತೆಯ ವಿವರಗಳನ್ನು ಪಡೆಯಬಹುದು. ಠೇವಣಿದಾರರು ಪಾನ್‌ಕಾರ್ಡ್ ಜೆರಾಕ್ಸ್ ಹಾಗೂ 15ಜಿ/ 15 ಹೆಚ್ ನೀಡಬೇಕಾಗಿ ವಿನಂತಿ.**
7. ಆರ್.ಬಿ.ಐ. ಸುತ್ತೋಲೆಯನ್ವಯ ಕೆ.ವೈ.ಸಿ. ನಿರ್ದೇಶನದಂತೆ ತಮ್ಮ ಇತ್ತೀಚಿನ ಗುರುತಿನ ಚೀಟಿ, ಆಧಾರ್ ಕಾರ್ಡ್, ಪಾನ್‌ಕಾರ್ಡ್ ಮತ್ತು ಭಾವಚಿತ್ರ ಹಾಗೂ ವಿಳಾಸದ ಪುರಾವೆಗಳನ್ನು ಬ್ಯಾಂಕಿಗೆ ನೀಡಲು ಸೂಚಿಸಿದೆ.

# ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ

## 2019-2020 ನೇ ಸಾಲಿನ ಬ್ಯಾಂಕಿನ ಆಡಳಿತ ವರದಿ

ಮಾನ್ಯರೆ,

ಆತ್ಮೀಯ ಸಹಕಾರಿ ಬಂಧುಗಳಾದ ಬ್ಯಾಂಕಿನ ನಮ್ಮ ನೆಚ್ಚಿನ ಸದಸ್ಯರೇ, ಈ ನಮ್ಮ ನಿಮ್ಮೆಲ್ಲರ ಬ್ಯಾಂಕ್ ಯಶಸ್ವಿ ಹಾಗೂ ಪ್ರಗತಿಪೂರ್ಣವಾಗಿ 38 ವಸಂತಗಳನ್ನು ಪೂರೈಸಿದ್ದು, ಕೋವಿಡ್ -19 ವೈರಸ್ ಮಹಾಮಾರಿ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನಲೆಯಲ್ಲಿ ಸರ್ಕಾರದ ಮಾರ್ಗಸೂಚಿ ಅನ್ವಯ ಹೆಚ್ಚು ಜನ ಒಂದೇ ಕಡೆ ಗುಂಪಾಗಿ ಸೇರುವಂತಿಲ್ಲದ ಕಾರಣ ಮತ್ತು ಮುಖ್ಯವಾಗಿ ಸರ್ವಸದಸ್ಯರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಬ್ಯಾಂಕಿನ 2019-2020 ನೇ ಸಾಲಿನ 39ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸರ್ಕಾರದ ಆದೇಶದ ಅನ್ವಯ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಿರುತ್ತದೆ. 2019-2020ನೇ ಸಾಲಿನ 39ನೇ ವೀಡಿಯೋ ಕಾನ್ಫರೆನ್ಸ್ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನು ಆದರದಿಂದ ಸ್ವಾಗತಿಸುತ್ತೇವೆ. ಹಾಗೂ ಬ್ಯಾಂಕಿನ 2019-2020ನೇ ಸಾಲಿನ ಲಾಭ-ನಷ್ಟ, ಆಸ್ತಿ - ಜವಾಬ್ದಾರಿ ತಃಖ್ತೆ, ಲೆಕ್ಕಪರಿಶೋಧನಾ ವರದಿಯನ್ನು ಆಡಳಿತ ಮಂಡಳಿಯ ಸಮಾಧಾನದೊಂದಿಗೆ ಸಭೆಯ ಮುಂದೆ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇವೆ.

ಮೇಲ್ಕಂಡ ಬ್ಯಾಂಕಿಗೆ 2020-2021 ರಿಂದ 2024-25 ರ 5 ಸಹಕಾರ ವರ್ಷಗಳ ಅವಧಿಗೆ ಚುನಾವಣೆ ಜರುಗಿ ಅವಿರೋಧವಾಗಿ ಅಧ್ಯಕ್ಷರಾಗಿ ಶ್ರೀ ಎ.ವೈ. ನೇಮಿರಾಜಯ್ಯ ಮತ್ತು ಉಪಾಧ್ಯಕ್ಷರಾಗಿ ಶ್ರೀ ಜಿ.ವಿ. ರಾಜೇಂದ್ರಕುಮಾರ್ ರವರು ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಬ್ಯಾಂಕ್ ವರದಿ ಸಾಲಿನ ಅಂತ್ಯಕ್ಕೆ ರೂ. 2,49,88,850.00ಗಳ ಷೇರು ಬಂಡವಾಳ ಹೊಂದಿದ್ದು ಇದು ಕಳೆದ ಸಾಲಿಗಿಂತ ರೂ. 6,88,900.00 ಗಳಷ್ಟು ಹೆಚ್ಚಾಗಿದ್ದು ಶೇಕಡ 2.83% ಪ್ರಗತಿಯನ್ನು ಸಾಧಿಸಲಾಗಿದೆ.

ವರದಿ ಸಾಲಿನ ಅಂತ್ಯಕ್ಕೆ ಮೀಸಲು ನಿಧಿ ಮತ್ತು ಇತರೆ ನಿಧಿಗಳು ರೂ. 4,09,04,138.26 ಇದ್ದು ಕಳೆದ ಸಾಲಿಗಿಂತ ರೂ. 59,69,571.67 ಗಳು ಹೆಚ್ಚಾಗಿದ್ದು ಶೇಕಡ 17.09% ರ ಪ್ರಗತಿಯನ್ನು ಸಾಧಿಸಲಾಗಿದೆ.

ಬ್ಯಾಂಕಿನ ವಿವಿಧ ಠೇವಣಿಗಳು ವರದಿ ಸಾಲಿನ ಅಂತ್ಯಕ್ಕೆ ರೂ. 41,53,80,662.35 ಗಳಾಗಿದ್ದು ವರದಿ ಸಾಲಿನಲ್ಲಿ ಕಳೆದ ಸಾಲಿಗಿಂತ ರೂ. 3,26,45,186.35 ಗಳ ಹೆಚ್ಚುವರಿ ಠೇವಣಿ ಸಂಗ್ರಹ ಮಾಡಿ ಶೇಕಡ 8.53 % ರ ಪ್ರಗತಿಯನ್ನು ಸಾಧಿಸಿದೆ

ವರದಿ ಸಾಲಿನ ಅಂತ್ಯಕ್ಕೆ ಬ್ಯಾಂಕಿನಲ್ಲಿ ನೀಡಲಾದ ವಿವಿಧ ಸಾಲಗಳು ಮತ್ತು ಮುಂಗಡಗಳು ರೂ. 30,53,06,653.06 ಇದ್ದು ಕಳೆದ ಸಾಲಿಗಿಂತ ಪ್ರಸಕ್ತ ಸಾಲಿಗೆ ರೂ. 84,06,002.00 ಕಡಿಮೆಯಾಗಿದ್ದು ಇದು ಶೇಕಡ 2.68% ರಷ್ಟು ಕಡಿಮೆಯಾಗಿದೆ.

ಬ್ಯಾಂಕಿನ ದುಡಿಯುವ ಬಂಡವಾಳ ವರದಿ ಸಾಲಿನ ಅಂತ್ಯಕ್ಕೆ ರೂ. 49,17,13,800.96 ಇದ್ದು ಕಳೆದ ಸಾಲಿಗಿಂತ ರೂ. 3,90,37,237.62 ಗಳು ಹೆಚ್ಚಾಗಿದ್ದು ಇದು ಶೇಕಡ 8.62% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

ಒಟ್ಟಾರೆಯಾಗಿ ಬ್ಯಾಂಕ್ ಈ ಸಾಲಿನಲ್ಲಿ ಎಲ್ಲಾ ಖರ್ಚು ವೆಚ್ಚಗಳನ್ನು ಹೊರತುಪಡಿಸಿ ರೂ. 73,28,154.07 ಗಳಷ್ಟು ನಿವ್ವಳಲಾಭ ಗಳಿಸಿರುತ್ತದೆ. ಇದು ಕಳೆದ ಸಾಲಿಗಿಂತ ರೂ.1,65,642.04 ಗಳಷ್ಟು ಹೆಚ್ಚುವರಿ ಲಾಭಗಳಿಸಿದ್ದು ಇದು ಶೇಕಡ 2.33% ಪ್ರಗತಿಯನ್ನು ಸಾಧಿಲಾಗಿದೆ.

ಬ್ಯಾಂಕ್ ಅತ್ಯುತ್ತಮ ಕಾರ್ಯನಿರ್ವಹಣೆಯಿಂದ ಈ ವರ್ಷವು ಕೂಡ 'ಬಿ' ವರ್ಗ ಶ್ರೇಣಿಯಲ್ಲಿ ಮುಂದುವರೆದಿರುತ್ತದೆ.

ನಮ್ಮ ಬ್ಯಾಂಕ್ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿನ ಜನತೆ ಬ್ಯಾಂಕಿನ ಸೇವೆಯನ್ನು ಪಡೆಯಲು ಆಶಿಸುತ್ತದೆ. ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಗೆ ಆಹ್ವಾನ ಪತ್ರಿಕೆಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆರೀತ್ಯಾ ಅಂಚೆ ಮೂಲಕ, ಇ -ಮೇಲ್, ಪತ್ರಿಕಾ ಪ್ರಕಟಣೆ ಹಾಗೂ ಮುದ್ದಾಂ ಮೂಲಕ ರವಾನಿಸಲು ಉಲ್ಲೇಖವಿದ್ದು ಬ್ಯಾಂಕ್ ಸದರಿ ಆಹ್ವಾನ ಪತ್ರಿಕೆಯನ್ನು ಕೋವಿಡ್ - 19 ನಿಂದಾಗಿ ಅಂಚೆ ಮೂಲಕ ರವಾನಿಸಿದ್ದು ಮತ್ತು ಪತ್ರಿಕಾ ಪ್ರಕಟಣೆ ಮೂಲಕ ಪ್ರಚುರಪಡಿಸಿದ್ದು ಈ ಕ್ರಮಕ್ಕೆ ಮಾನ್ಯ ಸದಸ್ಯರು ಸಹಕರಿಸಲು ಕೋರಿದೆ ಹಾಗೂ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಬ್ಯಾಂಕಿನ ಈ ಅಭಿವೃದ್ಧಿಗೆ ತಮ್ಮ ಸಲಹೆಗಳನ್ನು ಮತ್ತು ಮಾರ್ಗದರ್ಶನವನ್ನು ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧಿಕಾರಿಗಳಿಗೂ, ಸಹಕಾರ ಇಲಾಖೆಯ ಅಧಿಕಾರಿಗಳಿಗೂ, ವಾರ್ಷಿಕ ಸನ್ನದು ಲೆಕ್ಕಪರಿಶೋಧಕರಾದ ಮೆ|| ಎಂ. ನಾಗಸುಂದರ್ ಅಂಡ್ ಕೋ., ಚಾರ್ಟೆಡ್ ಅಕೌಂಟೆಂಟ್, ತುಮಕೂರು ಮತ್ತು ಆಂತರಿಕ ಲೆಕ್ಕಪರಿಶೋಧಕರಾದ ಮೆ|| ಕೆ.ಎಸ್.ಆರ್. ಮೂರ್ತಿ ಅಂಡ್ ಕೋ., ಚಾರ್ಟೆಡ್ ಅಕೌಂಟೆಂಟ್, ತುಮಕೂರು. ಹಾಗೂ ಲೆಕ್ಕಪರಿಶೋಧಕರಾದ ಆರ್.ವಿ. ಅಸೋಸಿಯೇಟ್ಸ್, ತುಮಕೂರು, ಕಾನೂನು ಸಲಹೆಗಾರರಾದ ಶ್ರೀ ಹೆಚ್.ವಿ. ರಂಗನಾಥರೆಡ್ಡಿ, ಸ್ಥಿರಾಸ್ತಿ ಮೌಲ್ಯಮಾಪಕರಾದ ಶ್ರೀ ಬಿ.ಪಿ. ಸುರೇಶ್‌ಕುಮಾರ್ ಮತ್ತು ಶ್ರೀ ಟಿ.ಪಿ. ಸುನೀಲ್ ರವರಿಗೆ, ವಾಹನಗಳ ಮೌಲ್ಯಮಾಪಕರಾದ ಶ್ರೀ ಟಿ.ಟಿ. ರವಿಶಂಕರ್‌ರವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಅದೇ ರೀತಿ ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಅದ್ವಿತೀಯ ಸಹಕಾರವನ್ನು ನೀಡುತ್ತಿರುವ ನಮ್ಮ ಬ್ಯಾಂಕಿನ ಎಲ್ಲಾ ಸದಸ್ಯರುಗಳಿಗೂ, ಗ್ರಾಹಕರುಗಳಿಗೂ, ಸಮಾಜದ ವಿವಿಧ ಪದಾಧಿಕಾರಿಗಳಿಗೂ ಹಾಗೂ ಬ್ಯಾಂಕಿನ ಸಿಬ್ಬಂದಿವರ್ಗದವರಿಗೂ ಮತ್ತು ಕಾರ್ಯಕಾರಿ ಮಂಡಳಿ ಸದಸ್ಯರಿಗೂ ಅಭಿನಂದಿಸುತ್ತಾ, ಬ್ಯಾಂಕ್ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ನಿಟ್ಟಿನಲ್ಲಿ ತಮ್ಮೆಲ್ಲರ ಸಹಕಾರ, ಸೌಹಾರ್ದತೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಪೇಕ್ಷಿಸುತ್ತಾ ಮತ್ತೊಮ್ಮೆ ತಮ್ಮೆಲ್ಲರಿಗೂ ಬ್ಯಾಂಕಿನ ವತಿಯಿಂದ ಹೃದಯಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

ದಿನಾಂಕ : 23-11-2020

ಸ್ಥಳ : ತುಮಕೂರು.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ

**ಶ್ರೀ ಜ್ವಾಲಾಪ್ರಸಾದ್**

ಮುಖ್ಯಕಾರ್ಯನಿರ್ವಾಹಕರು

# ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ., ತುಮಕೂರು, ತುಮಕೂರು ಜಿಲ್ಲೆ.

## ಇದರ 2019–2020ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

### ಭಾಗ–1

**(ಹಣ ದುರುಪಯೋಗ ಹಾಗೂ ಗುರುತರವಾದ ನ್ಯೂನ್ಯತೆಗಳ ಬಗ್ಗೆ – ಕಂಡಿಕೆಗಳನ್ನು ಓದುವುದು)**

### ಸಂಘದ ಪರಿಚಯಾತ್ಮಕ ವಿವರಗಳು

**1. ಸಂಘದ ವಿವರಗಳು**

| | | |
|---|---|---|
| 1 | ಸಂಘದ ಹೆಸರು | **ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ.,** |
| 2 | ಸಂಘದ ವಿಳಾಸ | 8ನೇ ಮುಖ್ಯ ರಸ್ತೆ. ಅಶೋಕನಗರ, ತುಮಕೂರು–572103 |
| 3 | ಸಂಘದ ನೋಂದಣಿ ಸಂಖ್ಯೆ/ದಿನಾಂಕ | ಸಂಖ್ಯೆಃ ಎ.ಆರ್.ಟಿ/ಸಿ/ಎಂಕೆಟಿ/ಆರ್‌ಇಜಿಎನ್/7999/1981.82<br>ದಿನಾಂಕ : 06.10.1981 ರಂದು ಶ್ರೀ ಪಾರ್ಶ್ವನಾಥ ಪತ್ತಿನ ಸಹಕಾರ ಸಂಘ ನಿ., ತುಮಕೂರು ಎಂದು ನೋಂದಣಿ ಯಾಗಿದ್ದು, ಉಪ ನಿಯಮ ತಿದ್ದುಪಡಿಯಂತೆ ಸಂಖ್ಯೆಃ ಎ.ಆರ್/32/ತಿದ್ದುಪಡಿ/21/ 1997.98 ದಿನಾಂಕಃ–09.01.1998 ರಂತೆ ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ., ಎಂದು ನೋಂದಣಿಯಾಗಿರುತ್ತದೆ. |
| 4 | ಸಂಘದ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) | ಬ್ಯಾಂಕಿನ ಉಪನಿಯಮ ಸಂಖ್ಯೆ 03 ರನ್ವಯ ತುಮಕೂರು ಜಿಲ್ಲಾ ವ್ಯಾಪ್ತಿಯ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುತ್ತೆ. |

**2. ಸಂಘದ ಮುಖ್ಯ ಉದ್ದೇಶಗಳು/ಚಟುವಟಿಕೆಗಳು: (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)**

ಸಂಘದ ಉಪನಿಯಮ ಸಂಖ್ಯೆ 05 ರ ಕ್ರ ಸಂ. (1) ರಿಂದ (23) ರವರೆಗೆ ವಿವರಿಸಿದಂತೆ ಬ್ಯಾಂಕಿನ ವಿವಿದ ಉದ್ದೇಶಗಳನ್ನು ಹೊಂದಿದ್ದು, ಪ್ರಮುಖ ಉದ್ದೇಶಗಳು ಈ ಕೆಳಕಂಡಂತಿದೆ.

| | |
|---|---|
| 1 | ಬ್ಯಾಂಕಿನ ಸದಸ್ಯರು ಸಹ ಸದಸ್ಯರು ನಾಮಮಾತ್ರ ಸದಸ್ಯರು ಹಾಗೂ ಠೇವಣಿದಾರರಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಭಾವನೆಯನ್ನು ಪ್ರೋತ್ಸಾಹಿಸುವುದು. |
| 2 | ಸದಸ್ಯರಿಂದ ಷೇರು ಬಂಡವಾಳ ಸಂಗ್ರಹಣೆ ಸದಸ್ಯರಿಂದ ಠೇವಣಿ ಸ್ವೀಕರಿಸುವುದು, ಜಿಲ್ಲಾ ಬ್ಯಾಂಕ್/ಅಪೆಕ್ಸ್ ಬ್ಯಾಂಕ್/ ಕರ್ನಾಟಕ ಸರ್ಕಾರದಿಂದ/ಕೇಂದ್ರ ಸರ್ಕಾರದಿಂದ ಸಾಲ ಪಡೆಯುವುದು. |
| 3 | ಸದಸ್ಯರಿಗೆ ವ್ಯಾಪಾರ ನಡೆಸಲು, ಗೃಹ ನಿರ್ಮಾಣ ಸಾಲ, ಸ್ಥಿರಾಸ್ತಿ ಆಧಾರ ಸಾಲ, ವಾಹನ ಖರೀದಿಗೆ ಸಾಲ ಮತ್ತು ಇತರೆ ವಿವಿದ ಉದ್ದೇಶಗಳಿಗೆ ಸಾಲ ಸೌಲಭ್ಯ ನೀಡುವುದು, |
| 4 | ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಪೂರೈಸುವ ವ್ಯವಹಾರ ಮಾಡುವುದು. |
| 5 | ತನ್ನ ಸದಸ್ಯರಿಗೆ ಸಣ್ಣ, ಗೃಹ ಮತ್ತು ಸ್ವಯಂ ಉದ್ಯೋಗ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ, ವ್ಯಾಪಾರ ಪ್ರಾರಂಭಿಸಲು ಕಟ್ಟಡ ಕಟ್ಟಲು, ಯಂತ್ರೋಪಕರಣ ಕೊಳ್ಳಲು ಸಾಲ ನೀಡುವುದು. |
| 6 | ನಿರುದ್ಯೋಗಿಗಳಿಗೆ ಸ್ವಂತ ಉದ್ಯಮ / ಉದ್ಯೋಗ ಸ್ಥಾಪಿಸಲು ಆರ್ಥಿಕ ಮತ್ತು ತಾಂತ್ರಿಕ ನೆರವನ್ನೊದಗಿಸುವುದು |

**3. ಸಂಘದ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ: (ದಿನಾಂಕ 31–03–2020 ರಲ್ಲಿದ್ದಂತೆ)**

| | | |
|---|---|---|
| 1 | ಅಧ್ಯಕ್ಷರು | **ಶ್ರೀ ಎ ವೈ ನೇಮಿರಾಜಯ್ಯ** ದಿ : 01–04–2019 ರಿಂದ 31–03–2020) |
| 2 | ಉಪಾಧ್ಯಕ್ಷರು | **ಶ್ರೀ ಬಿ ವಿ ರಾಜೇಂದ್ರಕುಮಾರ್** ದಿ : 01–04–2019 ರಿಂದ 31–03–2020) |
| 3 | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು | **ಶ್ರೀ ಜ್ವಾಲಾಪ್ರಸಾದ್.** ದಿ : 01–04–2019 ರಿಂದ 31–03–2020) |

**4. ಶಾಖೆಗಳು ಮತ್ತು ಅವುಗಳ ವಿಳಾಸ:**

| ಶಾಖೆಯ ಹೆಸರು | ಶಾಖೆಯ ವಿಳಾಸ | ಶಾಖಾ ವ್ಯವಸ್ಥಾಪಕರು |
|---|---|---|
| ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ., ಮಂಡಿಪೇಟೆ ಶಾಖೆ, ತುಮಕೂರು | 1ನೇ ಮುಖ್ಯ ರಸ್ತೆ, ಹೊಸ ಮಂಡಿಪೇಟೆ, ತುಮಕೂರು | ಶ್ರೀಮತಿ ಡಿ. ವಿಜಯಲಕ್ಷ್ಮಿ, ಲೆಕ್ಕಿಗರು (ಪ್ರಭಾರ ವ್ಯವಸ್ಥಾಪಕರು,) |

**ಲೆಕ್ಕಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು**

**5. ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ:**

| ಹೆಸರು | ಹುದ್ದೆ | ಕಛೇರಿ |
|---|---|---|
| ಶ್ರೀ ಜ್ವಾಲಾಪ್ರಸಾದ್<br>ಶ್ರೀ ಸುದೀರ್ ಹೆಚ್. ಎಂ. | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು<br>ಲೆಕ್ಕಿಗರು | ಪ್ರಧಾನ ಕಛೇರಿ ತುಮಕೂರು |
| ಶ್ರೀಮತಿ ವಿಜಯಲಕ್ಷ್ಮಿ ಡಿ. | ಲೆಕ್ಕಿಗರು | ಮಂಡಿಪೇಟೆ ಶಾಖೆ, ತುಮಕೂರು |

**6. ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ:**

| | |
|---|---|
| ಲೆಕ್ಕಪರಿಶೋಧಕರ ಹೆಸರು | **K.S. Ramamurthy** |
| ಹುದ್ದೆ ಹಾಗೂ ವಿಳಾಸ | **K.S.R.Murthy & Co** Chartered Accountants<br>'Sri Narasimhas' 4th Cross, Ashoka Nagar, Tumakuru - 572103. |
| ಎಂಪಾನಲ್‌ಮೆಂಟ್ ನಂಬರ್ | C-21/02/2013-14 |
| ಲೆಕ್ಕಪರಿಶೋಧನಾ ಅವಧಿ | ದಿ : 1.4.2018 ರಿಂದ 31.3.2019 ರವರೆಗೆ |

**7. ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ:**

| | |
|---|---|
| ಲೆಕ್ಕಪರಿಶೋಧಕರ ಹೆಸರು | **M. NAGASUNDAR** |
| ಹುದ್ದೆ ಹಾಗೂ ವಿಳಾಸ | **M. NAGASUNDAR & Co,** Chartered Accountants<br>1ST Main, 1ST CROSS Siddaganga Extension, Tumakuru- 572102. |
| ಎಂಪಾನಲ್‌ಮೆಂಟ್ ನಂಬರ್ | C-21/02/2013-14 |
| ನೇಮಕಾತಿ ಉಲ್ಲೇಖ/ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ | ದಿ: 15.09.2019 ರಂದು ನಡೆದ ಬ್ಯಾಂಕಿನ 2018–19ರ ವಾರ್ಷಿಕ ಮಹಾಸಭೆ ನಿರ್ಣಯ ಸಂಖ್ಯೆ (9) ರಲ್ಲಿ 2019–20 ರ ಬ್ಯಾಂಕಿನ ಲೆಕ್ಕಪರಿಶೋಧನೆಗೆ, ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿ ಬ್ಯಾಂಕಿನ ಪತ್ರ ಸಂಖ್ಯೆ 1813/2019–20 ದಿ: 27.09.2019 ರಂತೆ ಕೋರಿಕೆ ಪತ್ರ ಸಲ್ಲಿಕೆ. |
| ಲೆಕ್ಕಪರಿಶೋಧನೆಯ ಆರಂಭದ ದಿನಾಂಕ | ದಿ: 21.05.2020 |
| ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ | ದಿ: 03.06.2020 |
| ಲೆ.ಪ.ಗೆ ತೆಗೆದುಕೊಂಡ (ಮಾನವ) ದಿನಗಳು | ಒಟ್ಟು 10 ದಿನಗಳು |

**8. ಲೆಕ್ಕಪರಿಶೋಧನಾ ವರ್ಗೀಕರಣ :**

(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮ ಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.)

| | |
|---|---|
| ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ವರ್ಗೀಕರಣ | 2019–20ನೇ ಸಾಲಿಗೆ " ಬಿ " ತರಗತಿ |
| ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರ್ಗೀಕರಣ | 2018–19ನೇ ಸಾಲಿಗೆ " ಬಿ " ತರಗತಿ |

**9. ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಷೆ**

| |
|---|
| **1 ಸಂಘದ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ?** ಹೌದು |
| **2 ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ?** ಹೌದು ನಿಯಮಿತವಾಗಿ ನಡೆಯುತ್ತಿದೆ. |
| **3 ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು**<br>ಗಂಬೀರ ನ್ಯೂನತೆಗಳು ಯಾವುದೂ ಇರುವುದಿಲ್ಲ. ಸಾಮಾನ್ಯ ನ್ಯೂನತೆಗಳನ್ನು ಕಾಲ ಕಾಲಕ್ಕೆ ಸರಿಪಡಿಸಿ ಕೊಂಡಿರುವುದನ್ನು ಗಮನಿಸಲಾಗಿದೆ. |
| **4 ಅವುಗಳಿಗೆ ಸಂಘವು ನೀಡಿದ ಅನುಪಾಲನಾ ವರದಿಯ ವಿವರ**<br>ಲೆಕ್ಕಪರಿಶೋಧಕರ ವರದಿಯನ್ನು ಆಡಿಟ್ ಉಪ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ಅನುಪಾಲನೆ ಸಲ್ಲಿಸಲಾಗಿದೆ |
| **5 ಅಂತಹ ನ್ಯೂನತೆಗಳು ಮುಂದುವರೆದಿದೆಯೆ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು?**<br>ಆಗಿಂದಾಗ್ಗೆ ಪರಿಶೀಲಿಸಿ ಸರಿಪಡಿಸಿಕೊಳ್ಳಲಾಗಿದೆ. |

## <u>ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ</u>

**10) ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?**

| | | | |
|---|---|---|---|
| ಎ | ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಹೌದು | |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; | ಹೌದು | |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; | ಹೌದು | |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು; | ಹೌದು | |
| ಇ | ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ; | ಹೌದು | |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು | |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು | |
| ಹೆಚ್ | ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ; | | ಇಲ್ಲ |
| ಐ | ಸುಸ್ತಿದಾರರ ಸದಸ್ಯರ ಪಟ್ಟಿ; | ಹೌದು | |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ; | ಹೌದು | |
| ಕೆ | ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು; | ಹೌದು | |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು; | ಹೌದು | |
| ಎಂ | ಸಾಲ ದೃಢೀಕರಣ ತಃಖ್ತೆಗಳು; | | ಇಲ್ಲ |
| ಎನ್ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ; | ಹೌದು | |
| ಓ | ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು; | ಹೌದು | |

| | | | |
|---|---|---|---|
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು; | | ಇಲ್ಲ |
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು; | | ಇಲ್ಲ |
| ಅರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ; | | ಇಲ್ಲ |
| ಎಸ್ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು; | ಹೌದು | |
| ಟಿ | ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು; | ಹೌದು | |
| ಯು | ಮೀಸಲು ಇತರೆ ನಿಧಿಗಳ ಷೆಡ್ಯೂಲು; | ಹೌದು | |
| ವಿ | ಠೇವಣಿದಾರರ ಷೆಡ್ಯೂಲು; | ಹೌದು | |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು; | ಹೌದು | |
| ಎಕ್ಸ್ | ಅಖೈರು ದಾಸ್ತಾನಿನ ಷೆಡ್ಯೂಲು; | | ಇಲ್ಲ |
| ವೈ | ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು; | | ಇಲ್ಲ |
| ಝೆಡ್ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; | ಹೌದು | |

**11. <u>ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ:</u>**
**<u>ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ</u>**

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ? **<u>ಹೌದು ಸಲ್ಲಿಸಲಾಗಿದೆ.</u>**

2) ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ. 1809/2019–20 ದಿನಾಂಕ: 10.10.2019

3) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು. ಮುಂದುವರೆದವುಗಳು

ಗಂಭೀರ ಸ್ವರೂಪದ ಹಾಗೂ ಮುಂದುವರೆದ ನ್ಯೂನತೆ ಆಕ್ಷೇಪಣೆಗಳು ಯಾವುದು ಇರುವುದಿಲ್ಲ.

**12. <u>ಸಹಕಾರ ಸಂಘಕ್ಕೆ/ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕು</u>ರಿತು:**

(ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗು ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)

| | | |
|---|---|---|
| 1 | ಸಹಕಾರಿ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ | ಪಾಲನೆಯಾಗಿದೆ. |
| 2 | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ? | ಅನುಸರಿಸಲಾಗಿದೆ. |
| 3 | ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ: | ಅನುಸರಿಸಲಾಗಿದೆ. |
| 4 | **ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ** | ಸಹಕಾರ ಸಂಘಗಳ ಕಾಯಿದೆ ಕಲಂ 58 ರನ್ವಯ ಬ್ಯಾಂಕ್ ಹೊಂದಿರುವ ಇತರೆ ನಿಧಿಗಳನ್ನು ಪ್ರತ್ಯೇಕ ತೊಡಗಿಸದೇ ಇರುವುದು |
| 5 | **ಸಹಕಾರ ಇಲಾಖೆ ಅಥವಾ ಆರ್.ಬಿ.ಐನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ :** | ತನಿಖೆ ನಡೆದಿರುವುದಿಲ್ಲ. |

## ಭಾಗ – 2

## ಸಂಘದ ವ್ಯಾವಹಾರಿಕ ವಿವರಗಳು

**13. ದಿನಾಂಕ 31–03–2020 ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.**

| ಸದಸ್ಯತ್ವ | ಸಾಮಾನ್ಯ ಸದಸ್ಯತ್ವ | | ನಾಮಮಾತ್ರ ಸದಸ್ಯತ್ವ | | ಸಹ ಸದಸ್ಯತ್ವ | |
|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿ ಇದ್ದ ಸದಸ್ಯರು | 2778 | 2769 | | | 915 | 915 |
| ಹೊಸದಾಗಿ ಸದಸ್ಯತ್ವ ಪಡೆದವರು | 37 | 38 | | | 27 | 58 |
| ಸದಸ್ಯತ್ವದಿಂದ ಕಡಿಮೆ ಆದವರು | 34 | 29 | | | 59 | 58 |
| ಸಾಲಾಖೈರಿಗೆ ಇರುವ ಸದಸ್ಯರು | 2781 | 2778 | | | 883 | 915 |

**ಸದಸ್ಯತ್ವದ ಬಗ್ಗೆ ವಿಮರ್ಷೆ:**

**ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದರಷ್ಟರನ್ನು ಮೀರತಕ್ಕಲ್ಲ, ಒಂದು ವೇಳೆ ಈಗಾಗಲೇ ಸದರಿ ಪ್ರಮಾಣ 15 ಪ್ರತಿಶತಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಕ್ರಮಬದ್ಧ ಸದಸ್ಯತ್ವದ ಹೊಂದಲು ಅರ್ಹವಿದ್ದಲ್ಲಿ ಈ ತಿದ್ದುಪಡಿ ದಿನಾಂಕನಿಂದ 6 ತಿಂಗಳೊಳಗೆ ಅಂತಹ ಸಹಸದಸ್ಯರನ್ನು ಕ್ರಮಬದ್ದ ಸದಸ್ಯರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಬ್ಯಾಂಕಿನಲ್ಲಿರುವ ಸಹಸದಸ್ಯರ ಬಗ್ಗೆ ವಿಮರ್ಷಿಸುವುದು.**

ದಿ: 31.3.2020ರ ಅಂತ್ಯಕ್ಕೆ ಸಹ ಸದಸ್ಯತ್ವ ಹೊಂದಿರುವ 883 ಸದಸ್ಯರು ಇದ್ದು ಇದನ್ನು ಸಾಮಾನ್ಯ ಸದಸ್ಯತ್ವ ಹೊಂದಿರುವ 2781 ಸದಸ್ಯರಿಗೆ ಹೋಲಿಸಿದಾಗ ಇದು ಶೇ 31.75.ರಷ್ಟು ಆಗಿರುತ್ತದೆ.

ಈ ಪ್ರಮಾಣ ಶೇ 15ಕ್ಕಿಂತ ಹೆಚ್ಚಿಗೆ ಆಗಿರುತ್ತದೆ.

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಹಾಗೂ ಕಲಂ 16 ರನ್ವಯ ಕ್ರಮವಾಗಿರುವುದಿಲ್ಲ. ಕ್ರಮ ಅಗತ್ಯ.

**ಸಮಾಧಾನ :** ಕ್ರಮವಿಡಲಾಗುವುದು.

**ಎಲ್ಲ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಷೆ**

ಬಹುತೇಕ ಸದಸ್ಯರಿಂದ ಪಡೆಯಲಾಗಿದೆ. ಬಿಟ್ಟು ಹೊದಂತಹ ಪ್ರಕರಣಗಳನ್ನು ಸಹ ಗುರುತಿಸಿ ಕೆ ವೈ ಸಿ ದಾಖಲಾತಿಗಳನ್ನು ಪಡೆಯಲು ಸೂಚಿಸಿದೆ.

**ಸಂಘದ ಸದಸ್ಯರೊಡನೆ ಕೈಕೊಂಡ ವ್ಯವಹಾರಗಳಲ್ಲಿ ಇರುವ ನ್ಯೂನ್ಯತೆಗಳ ಬಗ್ಗೆ ವಿಮರ್ಷೆ :**

| | | |
|---|---|---|
| 1 | **ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ** | ಬ್ಯಾಂಕಿನಲ್ಲಿ ಸಾಮಾನ್ಯ ಸದಸ್ಯರು ಮತ್ತು ಸಹ ಸದಸ್ಯರಿಂದ ವಿವಿದ ಠೇವಣಿ ಸಂಗ್ರಹಣೆ ಮಾಡಿ ಅವಶ್ಯವುಳ್ಳ ಸದಸ್ಯರಿಗೆ ಸಾಲ ಸೌಲಭ್ಯ ಒದಗಿಸಲಾಗಿದೆ. |
| 2 | **ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ** | ಸದಸ್ಯೇತರ ವ್ಯಕ್ತಿಗಳೊಂದಿಗೆ ಠೇವಣಿ ಸಂಗ್ರಹಣೆ, ವ್ಯವಹಾರ ಮಾಡಲಾಗಿದೆ. ಠೇವಣಿ ಸಾಲ ನೀಡಲಾಗಿದೆ. ನಿಯಮಗಳನ್ನು ಅನುಸರಿಸಿ ಕ್ರಮಬದ್ದಗೊಳಿಸುವುದು. |
| 3 | **ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು** | ಅಂತಹ ಪ್ರಕರಣಗಳು ಯಾವುದು ಇರುವುದಿಲ್ಲ. |
| 4 | **ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ** | ಬ್ಯಾಂಕಿನಲ್ಲಿ ಸಂಗ್ರಹಣೆ ಆದ ಷೇರು ಧನ ಸಮರ್ಪಕವಾಗಿ ವಿನಿಯೋಗಿಸಲಾಗಿದೆ. |

## 14) ಷೇರು ಬಂಡವಾಳದ ಬಗ್ಗೆ ವಿಮರ್ಷೆ :

**1) ಅಧಿಕೃತ ಷೇರು ಬಂಡವಾಳ :**

**ಸಂಘದ ಉಪನಿಯಮದನ್ವಯ ಅಧಿಕೃತ ಷೇರು ಭಂಡವಾಳದ ಮಿತಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು \ಹಾಗೂ ಸಂಘದ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಷಿಸುವುದು.**

ಬ್ಯಾಂಕಿನ ಅಧಿಕೃತ ಷೇರು ಬಂಡವಾಳದ ಬಗ್ಗೆ ಬ್ಯಾಂಕಿನ ಉಪನಿಯಮದಲ್ಲಿ ಉಲ್ಲೇಖ ಇರುವುದಿಲ್ಲ. ಮಹಾ ಸಭೆಯಲ್ಲಿ ಅಧಿಕೃತ ಷೇರು ಧನ ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ನಿರ್ಧರಿಸಿಕೊಳ್ಳ ಬಹುದಾಗಿದ್ದು ರೂ 300.00 ಲಕ್ಷಗಳಿಗೆ ನಿರ್ಧರಿಸಿಕೊಳ್ಳಲಾಗಿದೆ.

ಉಪನಿಯಮ ಸಂಖ್ಯೆ 10 ಹಾಗೂ ಅದರ ತಿದ್ದುಪಡಿಯಂತೆ ಪ್ರತಿ ಷೇರಿನ ಮುಖ ಬೆಲೆ ರೂ 100.00 ಗಳಾಗಿದ್ದು ಕನಿಷ್ಟ 10 ಷೇರುಗಳನ್ನು ಹೊಂದಬೇಕಾಗಿರುತ್ತದೆ.

**ದಿನಾಂಕ 31–03–2020 ಕ್ಕೆ ಇರುವಂತೆ ಬ್ಯಾಂಕಿನ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ**

| ಷೇರು ಬಂಡವಾಳ | ಸರಕಾರದ ಷೇರು | | ಸಾಮಾನ್ಯ ಷೇರು | | ನಾಮಮಾತ್ರ ಸ: ಷೇರು | | ಸಹ ಸದಸ್ಯರ ಷೇರು | |
|---|---|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿದ್ದಂತೆ | 0 | 0 | 16562700 | 16262000 | 0 | 0 | 7737250 | 6834100 |
| ಪ್ರಸಕ್ತ ಸಾಲಿನಲ್ಲಿನ ಜಮಾ | 0 | 0 | 1137900 | 623050 | 0 | 0 | 952800 | 1931750 |
| ಪ್ರಸಕ್ತ ಸಾಲಿನಲ್ಲಿನ ಖರ್ಚು | 0 | 0 | 398200 | 322350 | 0 | 0 | 1003600 | 1028600 |
| ಸಾಲಾಖೈರಿಗೆ ಇದ್ದಂತೆ | 0 | 0 | 17302400 | 16562700 | 0 | 0 | 7686450 | 7737250 |

**ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಷೆ :**

**ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರು ಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಷಿಸುವುದು** ಸರ್ಕಾರದ ಷೇರು ಹೊಂದಿರುವುದಿಲ್ಲ.

**ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಷೆ**

**(ಇದರಲ್ಲಿ ಸಂದಾಯವಾದ ಷೇರು ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಷೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ, ಸಂಘದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಜಿಸ್ಟರಿನಲ್ಲಿ ಪೂರ್ಣ ವಿವರಗಳೊಂದಿಗೆ ಬರೆದು ಇಟ್ಟಿರುವ ಬಗ್ಗೆ ವಿಮರ್ಷಿಸುವುದು.)**

ದಿ: 31.3.2020ರ ಅಂತ್ಯಕ್ಕೆ ಸದಸ್ಯರಿಂದ ಸಂದಾಯವಾದ ಷೇರುಧನ ರೂ. 2,49,88,850.00 ಗಳು ಇರುತ್ತದೆ. ಉಪನಿಯಮ ಸಂಖ್ಯೆ 10 ಮತ್ತು ಅದರ ತಿದ್ದುಪಡಿಯಂತೆ ಬ್ಯಾಂಕಿನ ಪ್ರತಿ ಷೇರಿನ ಮುಖ ಬೆಲೆ ರೂ 100.00 ಗಳು ಇದ್ದು, ಸದಸ್ಯರ ಷೇರು ಖಾತೆಗಳನ್ನು ಪರಿಶೀಲಿಸಲಾಗಿ ಕೆಲವು ಖಾತೆಗಳಲ್ಲಿ ಅಪೂರ್ಣ ಷೇರುಗಳು ಇದ್ದು, ಇಂತಹ ಸದಸ್ಯರನ್ನು ಗುರುತಿಸಿ ಬಿನ್ನಾಂಶದಲ್ಲಿ ಇರುವ ಷೇರು ಮೊಬಲಗು ಸಹ ಪಡೆದು ಪೂರ್ಣ ಗೊಳಿಸಲು ಸೂಚಿಸಿದೆ. ಉಪ ನಿಯಮ ಸಂಖ್ಯೆ 12 ರಂತೆ ಸದಸ್ಯರಿಗೆ ಪೂರ್ಣ ಪ್ರಮಾಣದಲ್ಲಿ ಷೇರು ಪತ್ರ ವಿತರಣೆಯಾಗಿರುವುದಿಲ್ಲ, ವಿತರಿಸಲು ಸೂಚಿಸಿದೆ. ಸಹಕಾರ ಸಂಘಗಳ ಕಾಯಿದೆ ಕಲಂ 122 ರಂತೆ ಸದಸ್ಯರ ರಿಜಿಸ್ಟರ್ ನಿರ್ವಹಿಸಲಾಗಿದೆ.

**ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ? ತಾಳೆಯಾಗಿದೆಯೇ? (ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸ ಯಾವ ಸಾಲಿನದು ಎಂಬುದರ ಬಗ್ಗೆ ವಿಮರ್ಷಿಸುವುದು)**

ದಿ:31.03.2020ಕ್ಕೆ ಷೇರು ಬಾಕಿ ಕುಳುವಾರು ತಯಾರಿಸಿದ್ದು ಆಸ್ತಿ ಜವಾಬ್ದಾರಿ ತಃಖ್ತೆಯ ಬಾಕಿಗೆ ತಾಳೆಯಾಗಿದೆ. ಷೇರು ಕುಳುವಾರು ಸಂಕ್ಷಿಪ್ತ ವರದಿಗೆ ಲಗತ್ತಿಸಿದೆ.

## 15) ಮೀಸಲು ನಿಧಿ ಮತ್ತು ಇತರೆ ನಿಧಿಗಳು : 'ಶೆಡ್ಯೂಲ್ ಯು' ನಲ್ಲಿರುವ ಪ್ರಕಾರ:

| | |
|---|---|
| 1. | ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಲಾಗಿದೆಯೇ? |

| | |
|---|---|
| | **ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ? ಗುಂತಾವಣೆಯ ಮೇಲಿನ ಬಡ್ಡಿ ಸಾಲಾಖೈರಿಗೆ ಸಂಘಕ್ಕೆ ಜಮಾ ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ.**<br>ದಿ: 31.3.2020 ರ ಅಂತ್ಯಕ್ಕೆ ಆಪದ್ದನ ನಿದಿ ರೂ 1,76,92,120.36 ಗಳು ಇದ್ದು ಪ್ರತ್ಯೇಕವಾಗಿ ಕೆಳಗಿನಂತೆ ಗುಂತಾಯಿಸಲಾಗಿದೆ.<br>ರೂ 51,05,867.00ಗಳನ್ನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಆಪದ್ದನ ನಿಧಿ ಖಾತೆಯಲ್ಲಿ ತೊಡಗಿಸಿದೆ. ಬ್ಯಾಂಕಿನ ದೃಡೀಕರಣ ಪರಿಶೀಲಿಸಿದಾಗ ಆಪದ್ದನ ಶೀರ್ಷಿಕೆಯಡಿ ರೂ 51,05,867.00 ಮಾತ್ರ ತೊಡಗಿಸಿದ್ದು, ಉಳಿಕೆ ರೂ 1,25,86,253.36 ಸರ್ಕಾರಿ ಭದ್ರತಾ ಪತ್ರಗಳಲ್ಲಿ ತೊಡಗಿಸಿದೆ.<br>ಡಿಸಿಸಿ ಬ್ಯಾಂಕ್ ಆಪದ್ದನ ಠೇವಣಿ ಮೇಲೆ 2019.20ರಲ್ಲಿ ರೂ 3,68,522.77 ಗಳ ಬಡ್ಡಿ ಜಮೆ ಆಗಿದೆ |
| 2 | **ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆಯೆ?** ಹೌದು ಪಾಲನೆಯಾಗಿದೆ |
| 3 | **ಸಂಘವು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆದಿದ್ದಲ್ಲಿ, ಸದರಿ ಆದೇಶದ ಶರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು.** ಅನ್ವಯವಾಗಿಲ್ಲ |
| 4 | **ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು.** ಅನ್ವಯವಾಗಿಲ್ಲ. |
| 5 | **ಸಂಘವು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4)(ಬಿ)ಯ ಉಲ್ಲಂಘನೆಯಾಗಿದೆಯೇ?**<br>2018-19ನೇ ಸಾಲಿನ ನಿವ್ವಳ ಲಾಭ ವಿಲೇವಾರಿಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಗೆ ರೂ 1,07,438.00 ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳಿಗೆ ಸಹಕಾರ ಶಿಕ್ಷಣ ನಿಧಿ ರೂ 53,719.00 ಸಹಕಾರ ಶಿಕ್ಷಣ ನಿಧಿ ಕಾಯ್ದಿರಿಸಿದ್ದು, ಸಂಬಂಧಿಸಿದ ಸಂಸ್ಥೆಗಳಿಗೆ ಪಾವತಿಸಿದೆ. ಕಾಯಿದೆ ಕಲಂ **57(4)(ಬಿ)ಯ ಉಲ್ಲಂಘನೆಯಾಗಿರುವುದಿಲ್ಲ.** |

**16. ಹೊರಗಿನಿಂದ ಪಡೆದ ಸಾಲಗಳು:**

**ಸಂಘವು ಹೊರಗಿನಿಂದ ಸಾಲ ಪಡೆಯಲು ಉಪನಿಯಮದಲ್ಲಿ ಇರುವ ಅವಕಾಶ ಹಾಗೂ ಮಿತಿಯ ಬಗ್ಗೆ ವಿಮರ್ಷೆ**

ಉಪ ನಿಯಮ ಸಂಖ್ಯೆ 06(ಸಿ) ರಂತೆ ಸಾಲ ಪಡೆಯಲು ಅವಕಾಶ ಇರುತ್ತದೆ.

| | | | | | | |
|---|---|---|---|---|---|---|
| 1 | **ಬ್ಯಾಂಕಿನಿಂದ ಪಡೆದ ಸಾಲಗಳು:** | | | | | |
| | ಎ) ಬ್ಯಾಂಕಿನ ಹೆಸರು ಮತ್ತು ಶಾಖೆ | | ಬ್ಯಾಂಕ್ ಹೊರಗಿನಿಂದ ಯಾವುದೇ ರೂಪದ ಸಾಲ ಪಡೆದಿರುವುದಿಲ್ಲ. | | | |
| | ಬಿ) ಹೊರಗಿನಿಂದ ಪಡೆದ ವಿವಿದ ಸಾಲದ ವಿವರ: | | | | | |
| | ಕ್ರ.ಸಂ. | **ಸಾಲದ ವಿವರ** | **ಆರಂಭದ ಬಾಕಿ** | **ಸಾಲ ತಂದಿದ್ದು** | **ಸಾಲ ಮರುಪಾವತಿ** | **ವರ್ಷಾಂತ್ಯದ ಬಾಕಿ** |
| | 1. | ನಗದು ಪತ್ತಿನ ಸಾಲ | 0 | 0 | 0 | 0 |
| | 2. | ನಿಶ್ಚಿತ ಠೇವಣಿ ಸಾಲ | 0 | 0 | 0 | 0 |
| | 3. | ಒಟ್ಟು | 0 | 0 | 0 | 0 |
| | ಸಿ) ಪಡೆದ ಸಾಲಗಳಲ್ಲಿ ಸುಸ್ತಿ ಸಾಲದ ವಿವರ: | | | | | ಅನ್ವಯಿಸುವುದಿಲ್ಲ |
| | ಡಿ) ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ (ನಿಖರತೆ ಬಗ್ಗೆ ಪರಿಶೀಲಿಸಿ ವಿಮರ್ಷಿಸುವುದು) | | | | | ಅನ್ವಯಿಸುವುದಿಲ್ಲ |

| | | |
|---|---|---|
| | ಸಾಲಾಂತ್ಯ ದಿ: 31.3.2020ಕ್ಕೆ ಪಾವತಿಗೆ ಬಾಕಿ ಇರುವ ಬಡ್ಡಿ, ಈ ಬಡ್ಡಿಗೆ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸುವುದು. | |
| 2 | **ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳ ವಿವರ:**<br>(ಸಾಲಾಂತ್ಯ ದಿ: 31.3.2020 ಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ಹಾಗೂ ಈ ಸಾಲಗಳ ಸುಸ್ತಿ ಬಗ್ಗೆ ವಿಮರ್ಷೆ ನೀಡುವುದು) | ಅನ್ವಯಿಸುವುದಿಲ್ಲ |
| 3 | **ಸರ್ಕಾರದ ಸಾಲಗಳು:**<br>(ಸರ್ಕಾರದಿಂದ ಪಡೆದಿರುವ ವಿವಿದ ಸಾಲಗಳ ವರ್ಗಾವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ: 31.3.2020 ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಡೀಕರಣ ಪತ್ರದೊಂದಗೆ ತಾಳೆ ಇರುವ ಬಗ್ಗೆ ವಿಮರ್ಷೆ) | ಅನ್ವಯಿಸುವುದಿಲ್ಲ |
| 4 | ಸಂಘವು ಹೊರಗಿನಿಂದ ಪಡೆದ ಸಾಲದ ವರ್ಷಾಂತ್ಯಕ್ಕೆ ಕೊಡತಕ್ಕ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯಾತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.) | ಅನ್ವಯಿಸುವುದಿಲ್ಲ |

**17. ಠೇವಣಿಗಳು :**

| | | | | | | | |
|---|---|---|---|---|---|---|---|
| 1 | **ಸಂಘವು ಠೇವಣಿ ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ಠೇವಣಿ ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ**<br>ಬ್ಯಾಂಕಿನ ಉಪನಿಯಮ ಸಂಖ್ಯೆ 06(ಬಿ) ರಂತೆ ಹಾಗೂ ಬ್ಯಾಂಕಿನ ಒಳ ನಿಯಮಗಳಂತೆ ಸದಸ್ಯರಿಂದ ಚಾಲ್ತಿ ಠೇವಣಿ, ಉಳಿತಾಯ ಠೇವಣಿ, ನಿಶ್ಚಿತ ಠೇವಣಿ, ನಗದು ಪತ್ರ ಠೇವಣಿ, ಆವರ್ತ ಠೇವಣಿ, ನಿತ್ಯನಿದಿ ಠೇವಣಿ ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರು ನಿರ್ಧರಿಸುವ ಠೇವಣಿ ಸಂಗ್ರಹಣೆ ಮಾಡಲು ಅವಕಾಶ ಇರುತ್ತದೆ. ಹಾಲಿ ಬ್ಯಾಂಕಿನಲ್ಲಿ ಸಂಗ್ರಹಣೆ ಮಾಡಿರುವ ಠೇವಣಿ, ಉಪನಿಯಮ ಹಾಗೂ ಒಳನಿಯಮಗಳ ಅನುಸಾರ ಇರುತ್ತದೆ. | | | | | | |
| 2 | **ಸಂಘವು ಸಂಗ್ರಹಣೆ ಮಾಡಿರುವ ವಿವಿದ ಠೇವಣಿಗಳ ವಿವರಗಳು:** (ಕಳೆದ ಸಾಲು ಹಾಗೂ ಪ್ರಸಕ್ತ ಸಾಲಿಗೆ ಸಂಗ್ರಹಿಸಿರುವ ಮೊಬಲುಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಪ್ರತಿಶತ ಪ್ರಮಾಣದ ಮಾಹಿತಿಯೊಂದಿಗೆ ವಿಮರ್ಷಿಸಿ) | | | | | | |
| | **ಠೇವಣಿ ವಿವರಗಳು** | **ಆರಂಭದ ಬಾಕಿ** | **ಪ್ರಸಕ್ತ ಸಾಲಿನ ಜಮಾ** | **ಪ್ರಸಕ್ತ ಸಾಲಿನ ಖರ್ಚು** | **ವರ್ಷಾಂತ್ಯಕ್ಕೆ ಬಾಕಿ** | **ಯಾದಿಯ ಮೊತ್ತ** | **ಅಂತರ** |
| | ನಿಶ್ಚಿತ ಠೇವಣಿ | 141568735.00 | 76654909.00 | 69997291.00 | 148226353.00 | 148226353.00 | ತಾಳೆ ಇದೆ |
| | ವರ್ಧಮಾನ ನ.ಪ. ಠೇ. | 195442324.00 | 105032994.00 | 81352071.00 | 219123247.00 | 219123247.00 | ತಾಳೆ ಇದೆ |
| | ಸನ್ಮತಿ ನಿತ್ಯ ನಿಧಿ | 24305.00 | 0.00 | 0.00 | 24305.00 | 24305.00 | ತಾಳೆ ಇದೆ |
| | ಅರಹಂತ ಮುದ್ಧತಿ ಠೇ. | 5842747.00 | 4972997.00 | 4750809.00 | 6064935.00 | 6064935.00 | ತಾಳೆ ಇದೆ |
| | ಸಿಬ್ಬಂದಿ ಭದ್ರತಾ ಠೇ. | 60000.00 | 5000.00 | 0.00 | 65000.00 | 65000.00 | ತಾಳೆ ಇದೆ |
| | ಉಳಿತಾಯ ಠೇವಣಿ | 36216497.96 | 295405529.00 | 293766879.45 | 37855147.51 | 37855147.51 | ತಾಳೆ ಇದೆ |
| | ಚಾಲ್ತಿ ಠೇವಣಿ | 3157916.84 | 41720757.00 | 41260649.00 | 3618024.84 | 3618024.84 | ತಾಳೆ ಇದೆ |
| | ಸೌಭಾಗ್ಯ ಠೇವಣಿ | 422950 | 20000.00 | 39300.00 | 403650.00 | 403650.00 | ತಾಳೆ ಇದೆ |
| | **ಒಟ್ಟು ಮೊತ್ತ** | **382735475.80** | **523812186.00** | **491166999.45** | **415380662.35** | **415380662.35** | ತಾಳೆ ಇದೆ |

**ಒಟ್ಟು ಠೇವಣಿಗಳ ಕಳೆದ 02 ವರ್ಷಗಳ ಅಂಕಿಗಳೊಂದಿಗೆ ತುಲನಾತ್ಮಕ ವಿವರ**

| 2017–18ಕ್ಕೆ | 2018–19ಕ್ಕೆ | 2019–20ಕ್ಕೆ |
|---|---|---|
| 33,31,96,053. | 38,27,35,476.00 | 41,53,80,662.35 |

**ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಷೆ :**

ಪ್ರಸಕ್ತ 2019–20 ನೇ ಸಾಲಿಗೆ ಠೇವಣಿಗಳ ಸಂಗ್ರಹಣೆಯಲ್ಲಿ ಕಳೆದ ಸಾಲಿಗಿಂತ ರೂ 3,26,45,186.35 ಗಳು ಅಧಿಕವಾಗಿದ್ದು, ಕಳೆದ ಸಾಲಿನ ಠೇವಣಿ ಮೇಲೆ ಶೇ 8.53 ರಷ್ಟು ಆಧಿಕವಾಗಿದೆ. ಠೇವಣಿ ಸಂಗ್ರಹಣೆಯಲ್ಲಿ ಗಣನೀಯ ಪ್ರಗತಿ ಇರುತ್ತದೆ.

| | |
|---|---|
| 3 | **ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವಣಿ ಪಡೆಯಲಾಗಿದೆ?**<br>ಬ್ಯಾಂಕಿನಲ್ಲಿ ನಿಖರವಾದ ಮಾಹಿತಿ ಇರುವುದಿಲ್ಲ. ನಾಮ ಮಾತ್ರ ಸದಸ್ಯರನ್ನಾಗಿ ನೊಂದಾಯಿಸಿಕೊಂಡು ಠೇವಣಿ ಸ್ವೀಕರಿಸಲಾಗಿದೆ. |
| 4 | **ಠೇವಿನ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ**<br>ಹೌದು, ವರದಿ ಸಾಲಿನಲ್ಲಿ ವಿವಿದ ಠೇವಣಿಗಳ ಮೇಲೆ ರೂ 3,42,80,032.00 ಗಳ ಬಡ್ಡಿ ಪಾವತಿಸಲಾಗಿದೆ. |
| 5 | **ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ?** ಹೌದು, ನೀಡಲಾಗಿದೆ |
| 6 | **ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ**<br>ಪ್ರಸಕ್ತ ಸಾಲಿನಲ್ಲಿ ಬ್ಯಾಂಕ್ ಸಂಗ್ರಹಣೆ ಮಾಡಿರುವ ವಿವಿಧ ಠೇವಣಿಗಳ ಮೇಲೆ ಬಡ್ಡಿಯನ್ನು ಪಾವತಿಸಲಾಗಿದೆ. ದಿ: 31.3.2020ಕ್ಕೆ ನಿಶ್ಚಿತ ಠೇವಣಿಗಳ ಮೇಲೆ ರೂ 3,33,117.00 ಹಾಗೂ ಮುದ್ದತಿ ಠೇವಣಿ ಮೇಲೆ ರೂ 4,17,078.00ಗಳ ಬಡ್ಡಿ ಪಾವತಿಸಲು ಬಾಕಿ ಇದ್ದು, ಕುಳುವಾರು ತಯಾರಿಸಿ ಪಾವತಿಸಬೇಕಾದ ಬಡ್ಡಿ ಖಾತೆ ಶೀರ್ಷಿಕೆಯಡಿ ಅವಕಾಶ ಕಲ್ಪಿಸಲಾಗಿದೆ. ಕುಳುವಾರು ವರದಿಗೆ ಲಗತ್ತಿಸಿದ್ದು ತಾಳೆ ಇರುತ್ತದೆ. |
| 7 | **ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವರೋ?**<br>ಬ್ಯಾಂಕಿನಲ್ಲಿ ಕಳೆದ 6 – 7 ಸಾಲುಗಳಿಂದ ಪಿಗ್ಮಿ ವ್ಯವಹಾರ ಇರುವುದಿಲ್ಲ. ಆದರೆ ಹಿಂದಿನ ಬಾಕಿ ರೂ. 24,305.00ಗಳು ಬಾಕಿ ಇರುತ್ತದೆ. ಇದರ ವಿಲೇವಾರಿ ಬಗ್ಗೆ ಕ್ರಮ ಅಗತ್ಯ. |

**ಸಮಾಧಾನ :** ಕ್ರಮವಿಡಲಾಗುವುದು.

| | |
|---|---|
| 8 | **ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್.** ಯಾವುದೇ ಪ್ರಕರಣಗಳು ಇರುವುದಿಲ್ಲ. |
| 9 | **ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಿರುವರೇ?**<br>ಆದಾಯ ತೆರಿಗೆ ನಿಯಮಗಳನ್ನು ಪಾಲಿಸಲಾಗುತ್ತಿದೆ. |
| 10 | **ಅನಿಶ್ಚಿತ ಜವಾಬ್ದಾರಿಗಳು : (Contingent Liabilities)** ಯಾವುದೇ ಪ್ರಕರಣ ಇರುವುದಿಲ |
| 11 | **ದ್ರವ್ಯಾಸ್ತಿಗಳ (ಫ್ಲುಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ SLR/CRR ಗಳ ನಿರ್ವಹಣೆ–ಶಾಖೆಗಳ ವಾರದ ಆಖೈರದ ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಆ್ಯಂಡ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿ ಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ?**<br>ದ್ರವ್ಯಾಸ್ತಿಗಳ (ಫ್ಲೂಯಿಡ್ ರಿಸೋರ್ಸಸ್) ಬಗ್ಗೆ ಅನುಪಾಲನಾ ವರದಿಗಳನ್ನು ಕ್ರಮ ಬದ್ಧವಾಗಿ ಸಲ್ಲಿಸುತ್ತಿದ್ದು. \ SLR/ CRR ಗಳ ನಿರ್ವಹಣೆ ಬಗ್ಗೆ ಪ್ರತ್ಯೇಕ ತಃಖ್ತೆಯನ್ನು ಲಗತ್ತಿಸಿದೆ. SLR/CRR ಗಳ ನಿರ್ವಹಣೆಯಲ್ಲಿ ಕೊರತೆ ಇರುವುದಿಲ್ಲ. |
| 12 | **ವರದಿ ಸಾಲಿನಲ್ಲಿ ಇವುಗಳ ಪಾಲನೆಯಲ್ಲಿ ಆಗಿರುವ ವಿಫಲತೆಯ ಬಗ್ಗೆ ಹಾಗೂ ಈ ಕುರಿತು ರಿಝರ್ವ ಬ್ಯಾಂಕಿಗೆ ದಂಡದ ಮೊತ್ತ ಪಾವತಿಸಿದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿ ನಿಗದಿ ಪಡಿಸಿ ಆರ್ಥಿಕ ತ:ಖ್ತೆಯಲ್ಲಿ ತೋರಿಸಲಾಗಿದೆಯೇ?**<br>ಯಾವುದೇ ಪ್ರಕರಣಗಳು ಇರುವುದಿಲ್ಲ. |

| 13 | **ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:–**<br>(ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಷಿಸುವುದು)<br>ಕೆಲವು ಉಳಿತಾಯ/ಚಾಲ್ತಿ ಖಾತೆಗಳಲ್ಲಿ ಕನಿಷ್ಠ ಬ್ಯಾಲೆನ್ಸ್ ಇರುವುದಿಲ್ಲ. ಉಳಿದಂತೆ ಗುರುತಿಸುವಂತಹ ನ್ಯೂನತೆ ಇರುವುದಿಲ್ಲ.<br>1) ಸೌಭಾಗ್ಯ ಠೇವಣಿ ಖಾತೆಯಲ್ಲಿ ದಿ: 31.03.2020 ಕ್ಕೆ 60 ಪ್ರಕರಣಗಳಿಂದ ರೂ 4,03,650.00 ಬಾಕಿ ಇದ್ದು, ಈ ಪೈಕಿ 48 ಪ್ರಕರಣಗಳು ಪಕ್ವವಾಗಿವೆ. ಮೊತ್ತ 1,51,150.00 ಆಗಿದೆ. ಪಕ್ವವಾದ ಕೂಡಲೆ ಕ್ರಮ ಕೈಗೊಂಡು ಕ್ರಮಬದ್ದಗೊಳಿಸಿಲ್ಲ.<br>2) ನಿತ್ಯನಿಧಿ ಠೇವಣಿ ಖಾತೆಯಲ್ಲಿ ದಿ: 31.03.2020 ಕ್ಕೆ 34 ಪ್ರಕರಣಗಳಲ್ಲಿ ರೂ 24305.00 ಬಾಕಿ ಇದ್ದು ಬಹುತೇಕ ಎಲ್ಲಾ ಖಾತೆಗಳು 2009 ರಲ್ಲಿ ಪಕ್ವವಾಗಿದೆ. ಇವುಗಳ ವಿಲೇವಾರಿಗೆ ಕ್ರಮಕೈಗೊಂಡಿರುವುದಿಲ್ಲ. |
|---|---|

**ಸಮಾಧಾನ :** ಕ್ರಮವಿಡಲಾಗುವುದು.

**18. ಸಹಾಯಧನಗಳು :**

**ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ :**

| | |
|---|---|
| ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ.<br>(ಮಂಜೂರಾಗಿರುವ ಎಲ್ಲಾ ರೀತಿಯ ಸಹಾಯಧನದ ಬಗ್ಗೆ ಪೂರ್ಣವಾಗಿ ವಿವರಣೆ ನೀಡುವುದು) | ಪ್ರಕರಣಗಳು ಇರುವುದಿಲ್ಲ. |
| ಸಂಘವು ವರದಿ ಸಾಲಿನಲ್ಲಿ ಕೇಂದ್ರ / ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುತ್ತದೆಯೇ? ಪಡೆದಿದ್ದಲ್ಲಿ ಅದು ಸರ್ಕಾರದ ಆದೇಶಕ್ಕನುಗುಣವಾಗಿದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯವಾಗುವಲ್ಲಿ ಮಾತ್ರ) | ಪ್ರಕರಣಗಳು ಇರುವುದಿಲ್ಲ. |

**19. ಇತರೆ ಜವಾಬ್ದಾರಿಗಳು :–**

(ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು)

| ಕ್ರ ಸಂ | ವಿವರ | ಮೊತ್ತ | |
|---|---|---|---|
| 1) | ಷೇರು ಡಿವಿಡೆಂಡ್ | 7,74,669.00 | |
| 2) | ಸಿಬ್ಬಂದಿ ವೃತ್ತಿ ತೆರಿಗೆ | 2,000.00 | |
| 3) | ಆದಾಯತೆರಿಗೆ ಕೂಡಬೇಕಾಗಿರುವುದು | 8,35,000.00 | |
| 4) | ಸಿಬ್ಬಂದಿ ಜೀವ ವಿಮೆ | 4,741.00 | |
| 5) | **ಇತರೆ ಜವಾಬ್ದಾರಿಗಳು** | | |
| 1 | ವಾಹನ ಸಾಲದ, ದಾಖಲಾತಿ ಫೀ | 1,40,000.00 | |
| 2 | ಪೇ ಆರ್ಡರ್ ಪೇಯಬಲ್ | 25,351.00 | |
| 3 | ಲೆಕ್ಕಪರಿಶೋಧನಾ ಶುಲ್ಕ ಅವಕಾಶ | 1,25,000.00 | |
| 4 | ಡೆಫ್ ಖಾತೆ ಕೊಡಬೇಕಾದುದು | 1,08,560.00 | |
| 5 | ಟಿ ಡಿ ಎಸ್ | 26,416.00 | |
| 6 | ಜಿ ಎಸ್ ಟಿ | 54,837.00 | |
| 7 | ಸಿಬ್ಬಂದಿ ಗ್ರಾಚ್ಯುಟಿ | **2,65,227.28** | **ಒಟ್ಟು ರೂ 23,61,801.28** |

**ಅ) ಸದಸ್ಯರ ಷೇರು ಡಿವಿಡೆಂಡ್ ರೂ . 7,74,669.00 ಗಳು :** ದಿ: 31.3.2020 ರ ಅಂತ್ಯಕ್ಕೆ ಸದಸ್ಯರ ಷೇರು ಡಿವಿಡೆಂಡ್ ರೂ 7,74,669.00 ಗಳು ಪಾವತಿಗೆ ಬಾಕಿಇದ್ದು ವರ್ಷಾವಾರು ವಿವರ ಕೆಳಕಂಡಂತಿದೆ.

2016–17ನೇ ಸಾಲಿನದು 1,87,404.00

2017–18ನೇ ಸಾಲಿನದು 2,61,142.00

2018–19ನೇ ಸಾಲಿನದು 3,26,123.00

ಒಟ್ಟು ರೂ 7,74,669.00 ಗಳು ಇದ್ದು ಇದರ ವರ್ಷಾವಾರು ಕುಳುವಾರು ಹಾಜರಿದ್ದು ತಾಳೆ ಇರುತ್ತದೆ.

**ಆ) ಸಿಬ್ಬಂದಿ ವೃತ್ತಿ ತೆರಿಗೆ ರೂ 2000.00 :–**

ಸಿಬ್ಬಂದಿ ವರ್ಗದವರ ಮಾರ್ಚ್ 2020ರ ಮಾಹೆಯ ವೃತ್ತಿ ತೆರಿಗೆ ರೂ 2000.00 ಗಳು ಸಂಬಳದಲ್ಲಿ ಕಟಾವಣೆ ಆಗಿದ್ದು, ಈ ಮೊಬಲಗು ಏಪ್ರಿಲ್ 2020 ರ ಮಾಹೆಯಲ್ಲಿ ಸರ್ಕಾರಕ್ಕೆ ಪಾವತಿಸಲಾಗಿದೆ. ಕುಳುವಾರು ತಾಳೆ ಇರುತ್ತದೆ .

**ಇ) ಆದಾಯ ತೆರಿಗೆ ಕೊಡಬೇಕಾಗಿರುವುದು ರೂ 835000.00 ಗಳು :–**

ಪ್ರಸಕ್ತ ಸಾಲಿಗೆ ಆದಾಯ ತೆರಿಗೆ ಪಾವತಿಗೆ ರೂ 835000.00 ಗಳನ್ನು ಕಾಯ್ದಿರಿಸಿಕೊಂಡಿದೆ.

**ಈ) ಸಿಬ್ಬಂದಿ ಜೀವ ವಿಮೆ ರೂ 4741.00 :–**

ಸಿಬ್ಬಂದಿಯ ಮಾರ್ಚ್ 2020ರ ಜೀವ ವಿಮೆ ರೂ. 4741.00 ಸಂಬಳದಲ್ಲಿ ಕಟಾಯಿಸಿದ್ದು, ಏಪ್ರಿಲ್ 2020ರ ಮಾಹೆಯಲ್ಲಿ ವಿಮಾ ಕಂಪನಿಗೆ ಪಾವತಿಸಲಾಗಿದೆ. ಕುಳುವಾರು ತಾಳೆ ಇರುತ್ತದೆ.

**ಉ) ಇತರೆ ಜವಾಬ್ದಾರಿಗಳು :–**

**1) ವಾಹನ ಸಾಲದ ದಾಖಲಾತಿ ಫೀ ರೂ 1,40,000.00 ಗಳು :–**

ಬ್ಯಾಂಕಿನಲ್ಲಿ ವಾಹನ ಸಾಲ ವಿತರಿಸಿದಾಗ ದಾಖಲಾತಿಗಳನ್ನು ಸಲ್ಲಿಸಿದ ನಂತರ ಮನರ್‌ಭರಣ ಮಾಡಲಾಗುತ್ತಿದ್ದು, ಈ ಮೊಬಲಗು ದಿ: 31.3.2020ರ ಅಂತ್ಯಕ್ಕೆ ರೂ. 1,40,000.00 ಬಾಕಿ ಇರುತ್ತದೆ. ಇದರ ಕುಳುವಾರು ಪಟ್ಟಿ ಹಾಜರಿದ್ದು ತಾಳೆ ಇರುತ್ತದೆ.

**2) ಪೇ ಆರ್ಡರ್ ಕೊಡಬೇಕಾದ್ದು ರೂ 25,351.00 ಗಳು :–**

ಬ್ಯಾಂಕಿನಿಂದ ಪೇ ಆರ್ಡರ್ ನೀಡಿದ್ದು, ದಿ: 31.3.2020ರ ಅಂತ್ಯಕ್ಕೆ ನಗದಿಗೆ ಬಾರದೆ ಇರುವ ಪೇ ಆರ್ಡ್‌ರ್ ಮೊಬಲಗು ರೂ 25,351.00 ಗಳು ಇರುತ್ತದೆ. ಇದರ ಕುಳುವಾರು ಪಟ್ಟಿ ಹಾಜರಿದ್ದು ತಾಳೆ ಇರುತ್ತದೆ.

**3) ಸನ್ನದು ಲೆಕ್ಕಪರಿಶೋಧಕರ ಶುಲ್ಕ ಅವಕಾಶ ರೂ 1,25000.00 ಗಳು :–**

ಸನ್ನದು ಲೆಕ್ಕಪರಿಶೋಧಕರ ಸಂಭಾವನೆ 2019.20ನೇ ಸಾಲಿಗೆ ರೂ 1,25000.00 ಗಳ ಅವಕಾಶ ಕಲ್ಪಿಸಿಕೊಂಡಿದ್ದು, ಪಾವತಿಗೆ ಬಾಕಿ ಇರುತ್ತದೆ.

**4) ಡೆಫ್ ಖಾತೆ ಕೊಡಬೇಕಾದ್ದು ರೂ 1,08,560.00** (Depositers Education & Awareness Fund)

ಬ್ಯಾಂಕಿನಲ್ಲಿ ವಿವಿಧ ಠೇವಣಿಗಳಲ್ಲಿ ಕಳೆದ 10 ವರ್ಷಕ್ಕೂ ಮೇಲ್ಪಟ್ಟು ಸ್ಥಗಿತ ಗೊಂಡಂತಹ ಖಾತೆಗಳನ್ನು ಆರ್‌ಬಿಐ ನಿರ್ದೇಶನದಂತೆ ರೂ. 1,08,560.00 ಗಳನ್ನು ಈ ಮೇಲಿನ ಯೋಜನೆಗೆ ವರ್ಗಾವಣೆ ಆಗಿದ್ದು ಈ ಮೊಬಲಗು ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಕಾಂಟ್ರ ಕಾಣಿಸಿಕೊಂಡಿದೆ. ಈ ಠೇವಣಿಗಳಲ್ಲಿ ಖಾತೆದಾರರಿಂದ ಬೇಡಿಕೆ ಬಂದಲ್ಲಿ ಈ ಖಾತೆಯಲ್ಲಿ ವ್ಯವಹರಿಸಬೇಕಾಗಿರುತ್ತದೆ. ಕುಳುವಾರು ತಾಳೆ ಇರುತ್ತದೆ.

**5) ಟಿ ಡಿ ಎಸ್ ಪೇಯಬಲ್ ರೂ 26,416.00 ಗಳು :–**

ಮಾರ್ಚ್ 2020ರ ಮಾಹೆಯಲ್ಲಿ ಕಟಾಯಿಸಲಾದ ಟಿಡಿಎಸ್ ಮೊಬಲಗು ರೂ. 26,416.00ಗಳು ಸರ್ಕಾರಕ್ಕೆ ಪಾವತಿಯಾಗಲು ಬಾಕಿ ಇದ್ದು, ಈ ಮೊಬಲಗು ಏಪ್ರಿಲ್ 2020 ರ ಮಾಹೆಯಲ್ಲಿ ಪಾವತಿಸಲಾಗಿದೆ.

**6) ಜಿ.ಎಸ್.ಟಿ ರೂ 54,837.00 ಗಳು :–**

ಮಾರ್ಚ್ 2020ರ ಮಾಹಯೆಲ್ಲಿ ಜಿಎಸ್‌ಟಿ ಸಂಗ್ರಹಣೆ ಮೊಬಲಗು ರೂ. 54,837.00 ಗಳು ದಿ: 31.3.2020ರ ಅಂತ್ಯಕ್ಕೆ ಸರ್ಕಾರಕ್ಕೆ ಪಾವತಿಗೆ ಬಾಕಿ ಇದ್ದು, ಈ ಮೊಬಲಗು ಏಪ್ರಿಲ್ 2020ರ ಮಾಹೆಯಲ್ಲಿ ಪಾವತಿ ಆಗಿರುವುದನ್ನು ಗಮನಿಸಿದೆ.

**7) ಸಿಬ್ಬಂದಿ ಗ್ರಾಚುಯಿಟಿ ರೂ 2,65,227.28 ಗಳು :–**

ದಿ: 31.3.2020ಕ್ಕೆ ನೌಕರರ ಗ್ರಾಚುಯಿಟಿ ಮೊಬಲಗು ರೂ. 2,65,227.28 ಗಳು ಕ್ರೂಡೀಕೃತ ಮೊತ್ತ ಆಗಿದ್ದು, ಈ ಮೊಬಲಗು ನೌಕರರ ಸೇವಾ ಅವಧಿ ಗುರುತಿಸಿ ಅದಕ್ಕನುಗುಣವಾಗಿ ಕ್ರೂಡೀಕರಿಸಲಾಗಿದ್ದು. ಭಾರತೀಯ ಜೀವ ವಿಮಾ ನಿಗಮದ ಹೊಸ ಗ್ರೂಪ್ ಗ್ರಾಚುಯಿಟಿ ಯೋಜನೆ ಅನ್ವಯ ಈ ನಿಧಿಯಿಂದ ದಿ:22.04.2020 ರಂದು ರೂ. 2,65,227.00 ಪಾವತಿಸಿರುವುದನ್ನು ಗಮನಿಸಿಧೆ.

## 20. ಲಾಭ ವಿಂಗಡಣೆ

| |
|---|
| **ಹಿಂದಿನ ಸಾಲಿನ ಕ್ರೋಢೀಕೃತ ಲಾಭ 2018.19ನೇ ಸಾಲಿನದು:** ರೂ 71,62,511.67 ಗಳು |
| **ಲಾಭ ವಿಂಗಡನೆಗೆ ಮಹಾ ಸಭೆಯ ಒಪ್ಪಿಗೆ ಪಡೆಯಲಾಗಿದೆಯೆ? ಅದು ಕ.ಸ.ಸಂಘಗಳ ಕಾಯ್ದೆ ಕಲಂ 57 ಹಾಗೂ ಸಂಘದ ಉಪ ನಿಯಮ 109 ರನ್ವಯ ಮಾಡಿಕೊಳ್ಳಲಾಗಿದೆಯೇ?**<br>ಹೌದು ಲಾಭ ವಿಂಗಡನೆಗೆ ಮಹಾಸಭೆಯ ಒಪ್ಪಿಗೆ ಪಡೆಯಲಾಗಿದೆ, ಬ್ಯಾಂಕಿನ ಉಪನಿಯಮ ಹಾಗೂ ಸಹಕಾರ ಕಾಯಿದೆಯನ್ವಯ ವಿಲೇವಾರಿ ಮಾಡಲಾಗಿದೆ. |
| **ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ?**<br>ಶೇ 15ರಷ್ಟು ಷೇರು ಡಿವಿಡೆಂಡ್ ಘೋಷಣೆಯಾಗಿದ್ದು, ಹಂಚಿಕೆ ಆಗಿದೆ. |
| **ವಿತರಣೆಯಾಗದ ಲಾಭಾಂಶದ ಮೊತ್ತ :** 31/03/2020 ಕ್ಕೆ ಷೇರು ಡಿವಿಡೆಂಡ್ ಬಾಕಿ ರೂ 7,74,669.00 ಇರುತ್ತದೆ. |
| **ಮೂರು ವರ್ಷ ಮೀರಿದ ಕ್ರೋಢೀಕೃತ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮವಿರಿಸಲು ಸೂಚಿಸುವುದು.**<br>ಮೂರು ವರ್ಷಕ್ಕೂ ಮೀರಿದ ಷೇರು ಡಿವಿಡೆಂಡ್ ಮೊಬಲಗನ್ನು ನಿಯಮಾನುಸಾರ ಆಪದ್ದನ ನಿಧಿಗೆ ವರ್ಗಾಯಿಸಿಕೊಳ್ಳಲಾಗಿದೆ. |

## 21. ನಗದು ಶಿಲ್ಕು ಪರಿಶೀಲನೆ:

| | | | |
|---|---|---|---|
| ಸಾಲಾಖೈರಿಗೆ ಸಂಘದಲ್ಲಿನ ನಗದು ಶಿಲ್ಕು ರೂ. 1,22,05,098.00 ಗಳು | | | |
| ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು | | | |
| **ಪರಿಶೀಲನೆಯ ಕಛೇರಿ** | **ದಿನಾಂಕ** | **ನಗದು(ರೂ)** | **ಹಾಜರ ಪಡಿಸಿದ ಸಿಬ್ಬಂದಿ ಹೆಸರು/ಹುದ್ದೆ** |
| ಮುಖ್ಯ ಕಚೇರಿ | ದಿ: 01.06.2020 | 17,30,911.00 | ಶ್ರೀ ಟಿ.ಎ. ನಾಗರಾಜು, ನಗದು ಗುಮಾಸ್ತರು<br>ಶ್ರೀ ಹೆಚ್.ಎಮ್. ಸುಧೀರ್ ಲೆಕ್ಕಿಗರು |
| ಹೊಸಮಂಡಿಪೇಟೆ ಶಾಖೆ | ದಿ: 02.06.2020 | 64,949.00 | ಶ್ರೀ ಎಸ್.ಎನ್. ವೆಂಕಟೇಶ್ ಬಾಬು ನಗದು ಗುಮಾಸ್ತರು<br>ಶ್ರೀಮತಿ ಡಿ. ವಿಜಯಲಕ್ಷ್ಮಿ, ಲೆಕ್ಕಿಗರು |
| ಬ್ಯಾಂಕಿನಲ್ಲಿ ಅಡವು ಮಾಡಿರುವ ಚಿನ್ನದ ಆಭರಣಗಳ ಬಗ್ಗೆ ಪರಿಶೀಲನೆ ಮಾಡಲು ಯಾವುದೇ ಪ್ರಕರಣ ಇರುವುದಿಲ್ಲ. ಇದಕ್ಕೆ ಸಂಬಂಧಿಸಿದ ವಿವರ ಪ್ರತ್ಯೇಕ ಪುಸ್ತಕದಲ್ಲಿ ನಿರ್ವಹಿಸಿದೆ. | | | |
| **ಪರಿಶೀಲಿಸಿದ ನಗದು ನಗದು ಪುಸ್ತಕನೊಂದಿಗೆ ಹೊಂದಾಣಿಕೆಯಾಗುತ್ತಿದೆಯೇ?** ಹೌದು ತಾಳೆ ಇರುತ್ತದೆ. | | | |
| **ಲೆಕ್ಕ ಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಅದನ್ನು ಯಾವ ದಿನಾಂಕದ ವರೆಗೆ ಬರೆಯಲಾಗಿದೆ ಎಂಬುದರ ಬಗ್ಗೆ ವಿವರಣೆ ನೀಡುವುದು. ಹಾಗೂ ನಗದು ಪುಸ್ತಕದಲ್ಲಿ ದಾಖಲಿಸಿ ಹಾಜರಪಡಿಸಿದ ಕೈಶಿಲ್ಕದ ಮೊತ್ತ ನಗದು ಪುಸ್ತಕದಲ್ಲಿ ನಮೂದಿಸುವುದು**<br>ನಗದು ಪುಸ್ತಕ ಪೂರ್ಣ ಗೊಳಿಸಿ ಬರೆದಿದೆ. ನಗದು ಸ್ಕ್ರೋಲ್‌ನಲ್ಲಿ ನಮೂದಿಸಿದೆ. | | | |
| **ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿದ್ದಾರೆಯೆ? ಎಷ್ಟು? ಹಾಗೂ ಯಾರ ಅಭಿರಕ್ಷೆಯಲ್ಲಿ?**<br>ಬ್ಯಾಂಕಿನ ಮುಖ್ಯಕಛೇರಿಯಲ್ಲಿ ಉಳಿಸಿಕೊಳ್ಳಬಹುದಾದ ನಗದು ಶಿಲ್ಕು ಮಿತಿ ರೂ 20.00 ಲಕ್ಷ ಇರುತ್ತದೆ.<br>ಶಾಖಾ ಕಚೇರಿಯಲ್ಲಿ ರೂ 2.00 ಲಕ್ಷ ಮಿತಿ ನಿಗದಿ ಪಡಿಸಲಾಗಿದೆ. | | | |
| **ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ.**<br>ಬಹುತೇಕ ದಿನಗಳಲ್ಲಿ ನಿಗದಿಪಡಿಸಿದ ಮಿತಿಯಲ್ಲಿ ನಗದು ಶಿಲ್ಕು ಉಳಿಸಿಕೊಂಡಿರುತ್ತದೆ. | | | |
| **ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ? ವಿವರಣೆ ನೀಡಿ.** | | | |

| |
|---|
| ಹೌದು. ವಿಮಾ ಅವಧಿಯು ದಿ:16/04/2020 ರಿಂದ ದಿ:15/04/2021 ರವರೆಗೆ ಚಾಲ್ತಿಯಲ್ಲಿ ಇರುತ್ತದೆ.<br>ಪ್ರಧಾನ ಕಚೇರಿಯಲ್ಲಿ ರೂ 20.00 ಲಕ್ಷ ಗಳಿಗೆ ಕಪಾಟಿನಲ್ಲಿ ಇರುವ ಶಿಲ್ಕಿಗೆ ವಿಮೆ ಇರುತ್ತದೆ. ಶಾಖಾ ಕಛೇರಿಗೆ ರೂ 2.00 ಲಕ್ಷಗಳಿಗೆ ವಿಮೆ ಅಳವಡಿಸಿದೆ. |
| **ನಗದು ಶಿಲ್ಕನ್ನು ಕಾಲಕಾಲಕ್ಕೆ ಅಧಿಕೃತರು ಪರೀಕ್ಷಿಸಿದ್ದಾರೆಯೆ?** ಹೌದು |

## 22. ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು :–

| **ಎ) ಚಾಲ್ತಿ ಖಾತೆಗಳು** | ಖಾತೆ ಸಂಖ್ಯೆ | ಬ್ಯಾಂಕಿನ ಪ್ರಕಾರ ಉಳಿಕೆ ಶಿಲ್ಕು | ಸಂಘದ ಪುಸ್ತಕದ ಪ್ರಕಾರ ಉಳಿಕೆ ಶಿಲ್ಕು | ಅಂತರ |
|---|---|---|---|---|
| ತು.ಜಿ.ಸ.ಕೇ. ಬ್ಯಾಂಕ್ ನಿ., ತು. | 001011000011 | 2497834.60 | 2497834.60 | ತಾಳೆಯಿದೆ |
| ಕ.ರಾ.ಸ.ಅಪೆಕ್ಸ್ ಬ್ಯಾಂಕ್ ಬೆಂ. | 436001 | 1820855.22 | 1813859.22 | ರೂ 6996.00 ಸಮನ್ವಯ ತಃಖ್ತೆಯಂತೆ ತಾಳೆಯಿದೆ |
| ಭಾರತೀಯ ಸ್ಟೇಟ್ ಬ್ಯಾಂಕ್ ತು: | 10175515085 | 12236906.56 | 12224606.50 | ರೂ 12300.00 ಸಮನ್ವಯ ತಃಖ್ತೆಯಂತೆ ತಾಳೆಯಿದೆ |
